ದಿನಾಂಕಃ **19/06/2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ

ಎದುರುದಾರರ ಜೊತೆ ವಿವಾಹ ಆಗಿ 12 ವರ್ಷ ಆಗಿದೆ. ಇಬ್ಬರು ಮಕ್ಕಳು ಇದ್ದಾರೆ. ನಾನು ಟಿಪ್ಪರ್ ಚಾಲಕ. ನನಗೆ ಸ್ವಂತ ಟಿಪ್ಪರ್ ಇಲ್ಲ. ನನಗೆ 17-18 ಸಾವಿರ ಸಂಬಳ ಬರುತ್ತದೆ. 2010 ರಿಂದ ನಾನು ಚಾಲಕನಾಗಿ ಕೆಲಸ ಮಾಡುತಿದ್ದೇನೆ. ನನಗೆ ನನ್ನ ತಂದೆಯ ಹೆಸರಿನಲ್ಲಿ 3 1/2 ಎಕರೆ ಜಮೀನು ಇದೆ. ಮದುವೆಯಾದ ನಂತರ ನಾನು ಮತ್ತು ನನ್ನ ಹೆಂಡತಿ ಜಮೀನಿನಲ್ಲಿ ಕೆಲಸ ಮಾಡುತಿದ್ದೇವು ಎಂದರೆ ಬೆಂಗಳೂರಿನಲ್ಲಿ ಇದ್ದೆವು ಎಂದು ನುಡಿಯುತ್ತಾರೆ. ಬೆಂಗಳೂರಿನಲ್ಲಿ 6 ವರ್ಷ ಇದ್ದೆವು. ಆ ನಂತರ ಕೋವಿಡ್ ಸಮಯದಲ್ಲಿ ಊರಿಗೆ ಬಂದೆವು. ಆ ನಂತರ ನಾವಿಬ್ಬರು ಸೇರಿ ಜಮೀನಿನಲ್ಲಿ ಕೆಲಸ ಮಾಡುತಿದ್ದೆವು. ಆಲುಗಡ್ಡೆ, ಜೋಳ, ರಾಗಿ, ಭತ್ತ ಬೆಳೆಯುತಿದ್ದೆವು ಎಂದರೆ ಸರಿಯಲ್ಲ. ಹಸುಗಳನ್ನು ಸಾಕಿದ ಕಾರಣ ಹುಲ್ಲನ್ನು ಬೆಳೆಯುತಿದ್ದೆವು. ನನ್ನ ಅಣ್ಣ ಜಮೀನಿನ ಕೆಲಸ ಮಾಡುತಿದ್ದರು. ನನ್ನ ಜಮೀನಿನಲ್ಲಿ ಅಡಿಕೆ, ಬಾಳೆ ಇಲ್ಲ. ನನ್ನ ಹೆಂಡತಿ ಜಮೀನಿನಲ್ಲಿ ಬಾಳೆ, ಅಡಿಕೆಯನ್ನು ಹಾಕಿ ಅಭಿವೃದ್ಧಿಪಡಿಸಿದ್ದರು ಎಂದರೆ ಸರಿಯಲ್ಲ. ಕೆಲಸಗಾರರನ್ನು ಕರೆದುಕೊಂಡು ನನ್ನ ಹೆಂಡತಿ ಜಮೀನಿನಲ್ಲಿ ಬೆಳೆಗಳನ್ನು ಬೆಳೆಯುತಿದ್ದರು ಎಂದರೆ ಸರಿಯಲ್ಲ. ಅದರಿಂದ ಬಂದ ಆದಾಯವನ್ನು ನಾನು ಕಸಿದುಕೊಂಡು ಮಧ್ಯಪಾನ ಮಾಡಿಬಂದು ಹೊಡೆಯುತಿದ್ದೆನು ಎಂದರೆ ಸರಿಯಲ್ಲ. 5 ಹಸುಗಳು ಇದ್ದವು. ಅವುಗಳನ್ನೆಲ್ಲಾ ನನ್ನ ಹೆಂಡತಿ ನೋಡಿಕೊಳ್ಳುತಿದ್ದರು ಎಂದರೆ ನಾವಿಬ್ಬರೂ ನೋಡಿಕೊಳ್ಳುತಿದ್ದೆವು. ಅದರಿಂದ ಬಂದ ಆದಾಯವನ್ನು ಸಹ ನಾನು ಕೆಟ್ಟ ಚಟಗಳಿಗೆ ಪೋಲುಮಾಡುತಿದ್ದೆನು ಎಂದರೆ ಸರಿಯಲ್ಲ. ನಾನು ನನ್ನ ಹೆಂಡತಿಯನ್ನು ಲಾಲನೆ ಪೋಷಣೆ ಮಾಡದೇ ಜೀವನಕ್ಕೆ ಹಣವನ್ನು ಕೊಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಸುಮಿತ್ರ ಎನ್ನುವವರ ಪರಿಚಯ ಇಲ್ಲ. ನಾನು ಮನೆಯಲ್ಲಿ ಇರದೆ ಸುಮಿತ್ರ ಎನ್ನುವವರ ಜೊತೆ ಇರುತಿದ್ದೆ ಎಂದರೆ ಸರಿಯಲ್ಲ. ಹಸುಗಳು ಈಗ ಇಲ್ಲ. ನಾನು ಇಲ್ಲದ ಸಮಯದಲ್ಲಿ ನನ್ನ ಹೆಂಡತಿಯೇ ಮಾರಾಟ ಮಾಡಿದ್ದಾರೆ. ಅವರು ಮಾರಾಟ ಮಾಡಿದ ಬಗ್ಗೆ ದಾಖಲೆ ಕೊಡುತ್ತೇನೆ. ಅವು H.F ಹಸುಗಳು. ಒಂದು ಹಸು 80-90 ಸಾವಿರ ಬೆಲೆ ಬಾಳುತ್ತವೆ ಎಂದರೆ ಸರಿಯಲ್ಲ 40,000/- ಬೆಲೆ ಬಾಳುತ್ತವೆ. ಹಸುಗಳನ್ನು ಖರೀದಿ ಮಾಡಲು ನನ್ನ ಹೆಂಡತಿಯನ್ನು ಪುಸಲಾಯಿಸಿ ಅವರ ಒಡವೆಯನ್ನು ಕೊಣನೂರಿನ Indian oversis

bank ನಲ್ಲಿ ಅಡಮಾನ ಮಾಡಿಸಿದ್ದೆನು ಎಂದರೆ ಸರಿಯಲ್ಲ. ನನಗೆ ಗೊತ್ತಿಲ್ಲದ ಹಾಗೆ ಅವರೇ ಇರಿಸಿದ್ದಾರೆ. ವಾರದಲ್ಲಿ 2 ದಿನ ಮಾತ್ರ ಮನಗೆ ಬರುತಿದ್ದೆ. ಗ್ರಾಮೀಣ ಕೂಟ ಹಾಗೂ finance ನಲ್ಲಿ ನನ್ನ ಹೆಂಡತಿ ಒಡವೆಯನ್ನು ಅಡ ಇಟ್ಟು ಸಾಲ ಪಡೆದಿದ್ದೆನು ಎಂದರೆ ಸರಿಯಲ್ಲ ಅದು ವೈಯಕ್ತಿಕ ಸಾಲ ಮತ್ತು ಆ ಸಾಲವನ್ನು ತೀರಿಸಿದ್ದೇನೆ. ನನ್ನ ಹೆಂಡತಿ ಮಕ್ಕಳನ್ನು ನೋಡಲು ಬಂದಾಗ ನಾನು ಕುಡಿದು ಬಂದು ಅವರಿಗೆ ಹೊಡೆಯುತಿದ್ದೆನು ಎಂದರೆ ಸರಿಯಲ್ಲ. ನಾನು ಸುಮಿತ್ರ ರವರ ಜೊತೆ ಅನೈತಿಕ ಸಂಬಂಧವನ್ನು ಇಟ್ಟುಕೊಂಡಿದ್ದ ವಿಚಾರವನ್ನು ನನ್ನ ಹೆಂಡತಿ ಕೇಳಿದ ಕಾರಣ ನಾನು ಹೊಡೆದು ಆಚೆ ಹಾಕಿದ್ದೆ ಎಂದರೆ ಸರಿಯಲ್ಲ. ಅದರ ಸಂಬಂಧಕವಾಗಿ ಹಲವಾರು ಬಾರಿ ಪಂಚಾಯಿತಿ ಆಗಿದೆ ಎಂದರೆ ನಾನು ಇಲ್ಲದೇ ಇರುವ ಸಮಯದಲ್ಲಿ ಮನೆ ಬಿಟ್ಟು ಹೋಗಿರುವ ಕಾರಣ ಪಂಚಾಯಿತಿ ಆಗಿದೆ ಎನ್ನುತ್ತಾರೆ. ನಾನು ಇಲ್ಲಿ ಕೆಲಸ ಮಾಡಲು ಆಗುವುದಿಲ್ಲ ನನ್ನನ್ನು ಬೆಂಗಳೂರಿಗೆ ಕರೆದುಕೊಂಡು ಹೋಗು ಎಂಬ ಕಾರಣಕ್ಕೆ ಮನೆ ಬಿಟ್ಟು ಹೋಗಿದ್ದರು. ಸದರಿ ವಿಚಾರವನ್ನು ನಾನು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಸಣ್ಣ ಪುಟ್ಟ ವಿಚಾರಗಳಿಗೆ ಜಗಳ ಮಾಡುವುದು ಮತ್ತು ನಮ್ಮನ್ನು ನೋಡಿಕೊಳ್ಳುತ್ತಿರಲಿಲ್ಲ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ತಂದೆಯನ್ನು ಚೆನ್ನಾಗಿ ನೋಡಿಕೊಳ್ಳುತಿದ್ದರು ಎಂದರೆ ಸರಿಯಲ್ಲ. ಪಂಚಾಯಿತಿದಾರರು ನನಗೆ ಹಲವಾರು ಸುಮಿತ್ರ ರವರ ಸಹವಾಸವನ್ನು ಬಿಡು ಎಂದು ಹೇಳಿದರೂ ನಾನು ಪರಿಗಣಿಸಿಲ್ಲ ಮತ್ತು ಅವರನ್ನೇ ಮದುವೆಯಾಗುತ್ತೇನೆ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ಮಕ್ಕಳನ್ನು ನನ್ನ ಹೆಂಡತಿಯೇ ಕರೆದುಕೊಂಡು ಹೋಗಿದ್ದಾರೆ. ಈಗಲೂ ಸಹ ನನ್ನ ಹೆಂಡತಿಯೇ ಅವರಿಗೆ ವಿದ್ಯಾಭ್ಯಾಸ ಮಾಡಿಸುತಿದ್ದಾರೆ ಎಂದರೆ ನಿಜ. ಶಾಲೆಯ ಹತ್ತಿರ ಹೋದರೆ ನೋಡಲು ಬಿಡುವುದಿಲ್ಲ. ಅಧ್ಯಾಪಕರಿಗೆ ಮಕ್ಕಳನ್ನು ನೋಡಲು ಬಿಟ್ಟರೆ ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ನನ್ನ ಹೆಂಡತಿ ಧಮಕಿ ಹಾಕುತ್ತಾಳೆ. ಮಕ್ಕಳ ವಿದ್ಯಾಭ್ಯಾಸಕ್ಕೆ ಮತ್ತು ನನ್ನ ಹೆಂಡತಿಯ ಜೀವನಕ್ಕೆ ಯಾವುದೇ ಹಣವನ್ನು ಕೊಟ್ಟಿಲ್ಲ ಎಂದರೆ ನಿಜ. ಹೆಂಡತಿಯನ್ನು ನಾನು ಸಂಪೂರ್ಣವಾಗಿ ಎಲ್ಲಾ ವಿಚಾರಗಳಲ್ಲೂ ಕಡೆಗಣಿಸಿರುವ ಕಾರಣ ಅವರು ನನ್ನ ಜೊತೆ ಬಂದು ವಾಸಿಸಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಸಹಿ/-

(ಲೋಕೇಶ ಎಂ.ಜಿ)

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅರಕಲಗೂಡು